# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ:ಎಡಿಸ್ ಆರ್.ಆರ್.ಟಿ.ಎಸ್.ಆರ್: 225/14-15**

**ದಿನಾಂಕ : 25 -10-2016.**

**ಉಪಸ್ಥಿತರು : ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.**

**ಉಪವಿಭಾಗಾಧಿಕಾರಿ**

**ಪುತ್ತೂರು ಉಪವಿಭಾಗ**

**ಪುತ್ತೂರು**

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಎಮ್.ಟಿ. ಜೋಸೆಫ್ | | ತಹಶೀಲ್ದಾರರು |
| ಬಿನ್ ಎಮ್.ಜೆ. ತೋಮಸ್ | | ಬೆಳ್ತಂಗಡಿ ತಾಲೂಕು ದ.ಕ. |
| ಮಂಗಳತಿ ಕುಬೇಲ ಮನೆ, | - ಮತ್ತು - | |
| ತೋಟತ್ತಾಡಿ ಗ್ರಾಮ, | | |
| ಬೆಳ್ತಂಗಡಿ ತಾಲೂಕು ದ.ಕ. | | |
| (ನ್ಯಾಯವಾದಿ ಶ್ರೀ ಎ. ಮನೋಹರ ಕುಮಾರ್) | | |

- - - - -

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136ರನ್ವಯ ಬೆಳ್ತಂಗಡಿ ತಾಲೂಕು ತೋಟತ್ತಾಡಿ ಗ್ರಾಮದ MRH: 7/14-15 ರಂತೆ ತಹಶೀಲ್ದಾರರು ನೀಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ತೋಟತ್ತಾಡಿ ಗ್ರಾಮದ ಸ.ನಂ. 126/9A1 ರ ವಿಸ್ತೀರ್ಣ 0.74 ಎಕ್ರೆ, 126/6A2 ರ ವಿಸ್ತೀರ್ಣ 0.46 ಎಕ್ರೆ, 126/13 ರ ವಿಸ್ತೀರ್ಣ 0.35 ಎಕ್ರೆ, 126/10B1 ರ ವಿಸ್ತೀರ್ಣ 0.50 ಎಕ್ರೆ ಮತ್ತು ಸ.ನಂ. 126/8 ರ ವಿಸ್ತೀರ್ಣ 0.06 ಎಕ್ರೆ ಜಮೀನುಗಳನ್ನು ಮೇಲ್ಮನವಿದಾರರು ಬೆಳ್ತಂಗಡಿ ಸ.ರಿ. ಕಛೇರಿಯ ದಸ್ತಾವೇಜು ನಂಬ್ರ 3457/13-14 ದಿನಾಂಕ: 18-02-2014 ರಂತೆ 1) ಮೇರಿ ಕುಟ್ಟಿ, 2) ಜೆಸ್ಸಿನ್ ಲೂಕೋಸ್, 3) ಬೆಸ್ಸಿನ್ ಲೂಕೋಸ್ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಈ ಪೈಕಿ MRH: 7/14-15 ರಂತೆ ಸ.ನಂ. 126/9A1 ವಿಸ್ತೀರ್ಣ 0.74 ಎಕ್ರೆ ಮಾತ್ರ ಮ್ಯುಟೇಶನ್ ಬದಲಾವಣೆ ಆಗಿ ಪಹಣಿ ಆಗಿರುತ್ತದೆ. ಉಳಿದ ಸರ್ವೆ ನಂಬ್ರಗಳಿಗೆ ಪಹಣಿ ಆಗದ ಕಾರಣ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ: 24-02-2015 ರಂದು ಹಾಜರಾಗುವಂತೆ ನೋಟೀಸು ನೀಡಿ

ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ: 14-06-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಮೇಲ್ಮನವಿಯನ್ನು ಪುರಸ್ಕರಿಸಿ ಪಹಣಿ ದಾಖಲಾಗಲು ಬಾಕಿ ಇರುವ ತೋಟತ್ತಾಡಿ ಗ್ರಾಮದ ಸ.ನಂ. 126/6A2 ವಿಸ್ತೀರ್ಣ 0.46 ಎಕ್ರೆ, 126/13 ವಿಸ್ತೀರ್ಣ 0.35 ಎಕ್ರೆ, 126/10B1 ವಿಸ್ತೀರ್ಣ 0.50 ಎಕ್ರೆ ಮತ್ತು 126/8 ವಿಸ್ತೀರ್ಣ 0.06 ಎಕ್ರೆ ಗಳನ್ನು ಬೆಳ್ತಂಗಡಿ ತಾಲೂಕು ಸ.ರಿ. ಕಛೇರಿಯ ಕ್ರಯ ದಸ್ತಾವೇಜು 3457/13-14 ದಿನಾಂಕ: 18-02-2014 ರಂತೆ 1) ಮೇರಿ ಕುಟ್ಟಿ ಲೂಕೋಸ್, 2) ಜೆಸ್ಸಿನ್ ಲೂಕೋಸ್, 3) ಬೆಸ್ಸಿನ್ ಲೂಕೋಸ್ ರವರಿಂದ ಮೇಲ್ಮನವಿದಾರರ ಹೆಸರಲ್ಲಿ ಖಾತೆ ದಾಖಲು ಮಾಡುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ಮನವಿದಾರರ ಕೋರಿಕೆ ಸಮಂಜಸವಾಗಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ.

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಬೆಳ್ತಂಗಡಿ ತಹಶೀಲ್ದಾರರ ತೋಟತ್ತಾಡಿ ಗ್ರಾಮದ MRH :07//2014 -15 ನ್ನು ರದ್ದುಪಡಿಸಿದೆ. ಬೆಳ್ತಂಗಡಿ ತಾಲೂಕು ಸ.ರಿ ಕಛೇರಿಯ ಕ್ರಯ ದಸ್ತಾವೇಜು ನಂಬ್ರ 3457/13-14 ದಿನಾಂಕ : 18-02-2014 ರಂತೆ ವಿಭಾಗಪತ್ರದಲ್ಲಿ ಕಾಣಿಸಲಾದ ಎಲ್ಲಾ ಶೆಡ್ಯೂಲ್ ಗಳ ಪ್ರಕಾರ ಖಾತೆ ದಾಖಲಿಸಲು ಮರು ಪರಿಶೀಲನೆಯಿಂದ ನಿಯಮಾನುಸಾರ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

(ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್.)
ಸಹಾಯಕ ಆಯುಕ್ತರು
ಪುತ್ತೂರು ಉಪವಿಭಾಗ, ಪುತ್ತೂರು ದ.ಕ.

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಎ. ಮನೋಹರ ಕುಮಾರ್ ಇವರ ಮುಖಾಂತರ ಜ್ಯಾರಿ.
ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.